## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 838
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 13.03.2025
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಲ್ಲಾ ಇಲಾಖೆಗಳ ಎಲ್ಲಾ ಅಧಿಕಾರಿ ಸಿಬ್ಬಂದಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳಿವೆಯೇ; ಎಲ್ಲಾ ಇಲಾಖೆಗಳ ಎಲ್ಲಾ ಅಧಿಕಾರಿ ಸಿಬ್ಬಂದಿಗಳಿಗೆ ಎಚ್.ಆರ್.ಎಂ.ಎಸ್. ಮೂಲಕ ವೇತನ ಪಾವತಿಯಾಗುತ್ತಿದೆಯೇ; ಎಚ್.ಆರ್.ಎಂ.ಎಸ್ ರಹಿತವಾಗಿ ಯಾರಾರಿಗೆ ವೇತನ/ಸಂಭಾವನೆ/ಗೌರವಧನ ಪಾವತಿಯಾಗುತ್ತಿದೆ; (ವಿವರ ನೀಡುವುದು) | ರಾಜ್ಯ ಸರ್ಕಾರದ ಅಡಿಯಲ್ಲಿ ಬರುವ ಎಲ್ಲಾ ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳು ರಚಿತವಾಗಿರುತ್ತವೆ.<br><br>ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಹೆಚ್.ಆರ್.ಎಂ.ಎಸ್. ಮುಖಾಂತರ ವೇತನವನ್ನು ಪಾವತಿಸಲಾಗುತ್ತಿದೆ. |
| ಆ) | ನಾಗರಿಕ ಸೇವಾ ನಿಯಮಗಳನ್ವಯ ಸರ್ಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳಿಗಿರುವ ಸವಲತ್ತುಗಳೇನು; ಅಧಿಕಾರಿಗಳು ಕಾರ್ಯನಿರ್ವಹಿಸುವ ಸ್ಥಳದ ಮನೆ ಬಾಡಿಗೆ ಭತ್ಯೆ, ಪ್ರಭಾರ ಭತ್ಯೆ ಪ್ರಯಾಣ ಭತ್ಯೆ ಇವುಗಳನ್ನು ಚಾಲ್ತಿಯಲ್ಲಿರುವ ನಿಯಮಗಳಾನುಸಾರ ಕ್ಷಿಪ್ರ ಸಮಯದಲ್ಲಿ ಮಂಜೂರು ಮಾಡಲು ಕೈಗೊಂಡಿರುವ ಕ್ರಮಗಳೇನು; ಈ ತರಹದ ಎಷ್ಟು ಹಿಂಬಾಕಿ ಪಾವತಿಸಲು ಬಾಕಿಯಿದೆ; (ಇಲಾಖಾವಾರು ಮಾಹಿತಿ ನೀಡುವುದು) | ಕರ್ನಾಟಕ ನಾಗರಿಕ ಸೇವಾ ನಿಯಮಗಳ ಪ್ರಕಾರ ಸರ್ಕಾರಿ ಅಧಿಕಾರಿ/ ಸಿಬ್ಬಂದಿಗಳಿಗೆ ಈ ಕೆಳಕಂಡ ಸವಲತ್ತುಗಳನ್ನು ನೀಡಲಾಗಿರುತ್ತದೆ:-<br>1. ವೇತನ<br>2. ಮನೆ ಬಾಡಿಗೆ ಭತ್ಯೆ<br>3. ಪ್ರಭಾರ ಭತ್ಯೆ ಹಾಗೂ ಇತರೆ ಭತ್ಯೆಗಳು<br>4. ಗಳಿಕೆ ರಜೆ ನಗದೀಕರಣ ಸೌಲಭ್ಯ<br>5. ರಜೆ ಪ್ರಯಾಣ ರಿಯಾಯಿತಿ ಸೌಲಭ್ಯ<br>6. ಸ್ವಗ್ರಾಮ ಪ್ರಯಾಣ ರಿಯಾಯಿತಿ ಸೌಲಭ್ಯ<br>7. ರಜೆ ಸೌಲಭ್ಯಗಳು (ಸಾಂದರ್ಭಿಕ ರಜೆ, ನಿರ್ಬಂಧಿತ ರಜೆ, ಗಳಿಕೆ ರಜೆ, ಪರಿವರ್ತಿತ ರಜೆ, ಶಿಶುಪಾಲನಾ ರಜೆ, ಪ್ರಸೂತಿ ರಜೆ, ಪಿತೃತ್ವ ರಜೆ, ಇತ್ಯಾದಿ.)<br><br>ಮೇಲಿನ ಎಲ್ಲಾ ಸವಲತ್ತುಗಳನ್ನು ಅರ್ಹತೆಯ ಅನುಸಾರ ಸಕಾಲದಲ್ಲಿ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. |
| ಇ) | ಸರ್ಕಾರಿ ನೌಕರರ ವೇತನದಿಂದ ಪ್ರತಿ ತಿಂಗಳು ಕಟಾವಣೆಯಾಗುವ ಎನ್‌ಪಿಎಸ್/ಜಿಪಿಎಫ್/ಕೆಜಿಐಡಿ/ಎಲ್‌ಐಸಿ, ಮುಂತಾದವುಗಳ ಮೊತ್ತವು ಸಂಬಂಧಿಸಿದ ಉಪಶೀರ್ಷಿಕೆಗಳಿಗೆ ಕ್ಷಿಪ್ರ ಸಮಯದಲ್ಲಿ ಜಮೆಯಾಗದೆ ಸರ್ಕಾರಿ ಅಧಿಕಾರಿ ಸಿಬ್ಬಂದಿಗಳಿಗೆ ಆಗುತ್ತಿರುವ ತೊಂದರೆಗಳನ್ನು ಸರಿಪಡಿಸಲು ಯಾವ ರೀತಿ ಕ್ರಮವಹಿಸಲಾಗುತ್ತಿದೆ; (ವಿವರ ನೀಡುವುದು) | ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಈ) | ರಾಜ್ಯ ಸರ್ಕಾರಿ ನೌಕರರಿಗೆ ಸಂಬಂಧಿಸಿದ ವಿವಿಧ ಬಡ್ತಿಗಳು, ವಾರ್ಷಿಕ ಕಾರ್ಯ ನಿರ್ವಹಣಾ ವರದಿ ಮತ್ತು ಇಲಾಖಾ ವಿಚಾರಣೆ ಮುಂತಾದ ಸೇವಾ ವಿಷಯಗಳನ್ನು ಸಕಾಲ ಕಾಯ್ದೆಯಡಿಯಲ್ಲಿ ತರಲಾಗಿದೆಯೇ; ಈವರೆಗೆ ವಿವಿಧ ಇಲಾಖೆಗಳ ಎಷ್ಟು ಸರ್ಕಾರಿ ನೌಕರರ ಕಾಲ ಮಿತಿ ಬಡ್ತಿ, ವೇತನ ಬಡ್ತಿ ಮತ್ತು ಬಡ್ತಿ ನೀಡಲು ಬಾಕಿಯಿದೆ; ಬಾಕಿಯಿಡಲು ಕಾರಣಗಳೇನು; ಯಾವಾಗ ಅವುಗಳನ್ನು ನೀಡಲಾಗುವುದು (ಇಲಾಖಾವಾರು ಮಾಹಿತಿ ನೀಡುವುದು) | ದಿನಾಂಕ:26.09.2025ರನ್ವಯ ಸಕಾಲ ಕಾಯ್ದೆಯಡಿ ಶಾಲಾ ಶಿಕ್ಷಣ ಇಲಾಖೆ-20, ಸರ್ಕಾರಿ ಕೇಂದ್ರ ಮುದ್ರಣಾಲಯ -20, ಸರ್ಕಾರಿ ವಿಮಾ ಇಲಾಖೆ-47, ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ-20, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ-12, ಲೋಕೋಪಯೋಗಿ ಇಲಾಖೆ-27, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ/ |

ಕಶಿಫ್ ವಿಭಾಗಗಳು/ ಉಪವಿಭಾಗಗಳು-44, ಅರಣ್ಯ ಇಲಾಖೆ-21. ಸಿಆಸುಇ-21, ವಿಭಾಗ-ಜಲಸಂಪನ್ಮೂಲ ಇಲಾಖೆ-27. ಕಾಲೇಜು ಶಿಕ್ಷಣ ಇಲಾಖೆ-10. ವಿಶ್ವವಿದ್ಯಾನಿಲಯದ ಹಣಕಾಸು 4 ಸೇವೆಗಳಂತೆ, ಸಕಾಲ ಕಾಯ್ದೆಯಡಿ ಒಟ್ಟಾರೆ 309 ಸಿಬ್ಬಂದಿ ಸೇವೆಗಳನ್ನು ಅಧಿಸೂಚಿಸಲಾಗಿದೆ.

ಸಕಾಲ ಮಿಷನ್ ಕಾಯ್ದೆಯಡಿ ಅಧಿಸೂಚಿತ ಸೇವೆಗಳನ್ನು ನಿಗದಿತ ಕಾಲಮಿತಿಯೊಳಗೆ ಇತ್ಯರ್ಥಪಡಿಸದಿದ್ದಲ್ಲಿ, ಮೇಲ್ಮನವಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

**ಸಂಖ್ಯೆ: ಸಿಆಸುಇ 72 ಸೇನಿಡಿ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ